

## ಭಾರತದ ಹೆಮ್ಮೆಯ ವೈಜ್ಞಾನಿಕ ಸಂಸ್ಥೆಗಳು

- ಭಾರತೀಯ ವಿಜ್ಞಾನ ಸಂಸ್ಥೆ (IISC)
- ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ (TIFR)
- ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್ (JNCASR)
- ನ್ಯಾಶನಲ್ ಸೆಂಟರ್ ಫಾರ್ ಬಯಾಲಜಿಕಲ್ ಸೈನ್ಸಸ್ (NCBS)
- ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ (NISER)
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ (IISER)
- ನ್ಯಾಶನಲ್ ಸೆಂಟರ್ ಫಾರ್ ಸೆಲ್ ಸೈನ್ಸಸ್ (NCCS)
- ಸೆಂಟರ್ ಫಾರ್ ಸೆಲ್ಯುಲರ್ ಅಂಡ್ ಮಾಲಿಕ್ಯುಲರ್ ಬಯಾಲಜಿ (CCMB)
- ಇನ್‌ಸ್ಟಿಟ್ಯೂಟ್ ಆಫ್ ಜಿನೋಮಿಕ್ಸ್ ಅಂಡ್ ಇಂಟಗ್ರೇಟಿವ್ ಬಯಾಲಜಿ (IGIB))
- ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (CSIR)
- ಬಾಬಾ ಆಟಾಮಿಕ್ ರಿಸರ್ಚ್ ಸೆಂಟರ್ (BARC)
- ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ (RRI)
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ (IIA)
- ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್ (ISRO)
- ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರೀಸ್ (NAL)
- ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ICMR)
- ನ್ಯಾಷನಲ್ ಫಿಸಿಕಲ್ ಲ್ಯಾಬೋರೇಟರಿ (NPL)

ಇತ್ತೀಚಿನ ವರ್ಷಗಳಲ್ಲಿ ಬ್ರಾಯ್ಲರ್ ಕೋಳಿ ಮಾಂಸದ ಉತ್ಪಾದನೆ 32 ಲಕ್ಷ ಟನ್ ಆಗಿದ್ದು, 2009ರಿಂದ ಉತ್ಪಾದನೆಯ ಪ್ರಮಾಣ ಶೇ. 30ರಷ್ಟು ಹೆಚ್ಚಾಗಿದೆ. ಅಮೆರಿಕದ 'ಫುಡ್ ಅಂಡ್ ಅಗ್ರಿಕಲ್ಚರಲ್ ಆರ್ಗನೈಜೇಶನ್' ಭಾರತದ ಸಾಧನೆಯನ್ನು ಮೆಚ್ಚಿಕೊಂಡಿದೆ.

ಕೇಂದ್ರ ಸರ್ಕಾರದ ನಿರ್ದೇಶನದಂತೆ ಕೆಲಸ ಮಾಡುವ 'ರಾಷ್ಟ್ರೀಯ ಮಾಂಸ ಮತ್ತು ಪೌಲ್ಟ್ರಿ ಸಂಸ್ಕರಣ ನಿಗಮ'ದ ವರದಿ ಭಾರತದ ಮಾಂಸೋದ್ಯಮ 700 ಶತಕೋಟಿ ಡಾಲರ್ ಮಾರುಕಟ್ಟೆ ಮೌಲ್ಯ ಹೊಂದಿದೆ ಎಂದು ಹೇಳಿದೆ. ಈ ಉದ್ಯಮದ ಮೇಲೆ ಆದಾಯ ತೆರಿಗೆಯಾಗಲೀ ಅಬಕಾರಿ ತೆರಿಗೆಯಾಗಲೀ ಇಲ್ಲ. ರಫ್ತು ಮಾಡಲು ಯಾವುದೇ ನಿರ್ಬಂಧವಿಲ್ಲ. ಈ ಕ್ಷೇತ್ರದಲ್ಲಿ ಶೇ. 100ರಷ್ಟು ನೇರ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶವಿದೆ.

2001ರಲ್ಲೇ ದನದ ಮಾಂಸ ರಫ್ತು ಮಾಡುವಲ್ಲಿ ಬ್ರೆಜಿಲ್ ಮತ್ತು ಆಸ್ಟ್ರೇಲಿಯಾಗಳನ್ನು ಭಾರತ ಹಿಂದಿಕ್ಕಿದೆ. ಉತ್ತರ ಪ್ರದೇಶ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಪಂಜಾಬ್ ರಾಜ್ಯಗಳು ಅತಿಹೆಚ್ಚು ಮಾಂಸ ಉತ್ಪಾದಕ ರಾಜ್ಯಗಳೆನಿಸಿವೆ.

### ಶಕ್ತಿ ಕ್ರಾಂತಿ

ಮೇಲಿನ ಎಲ್ಲ ಸಾಧನೆಗಳಿಗಿಂತ ಕಿರೀಟಪ್ರಾಯವಾದುದು ನಾವು ಶಕ್ತಿ ಕ್ಷೇತ್ರದಲ್ಲಿ ಸಾಧಿಸಿದ ಸಿದ್ಧಿ. ಅಣುಗಳನ್ನು ಬೆಸೆಯುವುದಿರಲಿ, ಒಡೆಯುವುದಿರಲಿ ನಮ್ಮ ವಿಜ್ಞಾನಿಗಳು ಸಿದ್ಧಹಸ್ತರು. ಈ ಒಂದು ವಿಷಯದಲ್ಲಿ ಬಹುಕಾಲದವರೆಗೆ ಬೇರೆಯವರನ್ನು ಅವಲಂಬಿಸಿ ಅನುಸರಿಸುತ್ತಿದ್ದ ನಮ್ಮ ವಿಜ್ಞಾನಿಗಳು ಈಗ ನಮ್ಮದೇ ಶಕ್ತಿಕೇಂದ್ರಗಳನ್ನು ಸೃಷ್ಟಿಸಿದ್ದಾರೆ. ಅಣುವಿದ್ಯುತ್ ಉತ್ಪಾದಿಸುವ ರಿಯಾಕ್ಟರ್‌ಗಳನ್ನು ರೂಪಿಸಿ ಬಲಿಷ್ಠ ರಾಷ್ಟ್ರಗಳ ಹಂಗು ತೊರೆದು ದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಅನೇಕ ಶಾಖೋತ್ಪನ್ನ ವಿದ್ಯುತ್ ಘಟಕಗಳನ್ನು ನಿರ್ಮಿಸಿ ದೇಶದುದ್ದಕ್ಕೂ ಬೆಳಕು ನೀಡುವಲ್ಲಿ ವಿಜ್ಞಾನಿಗಳು ವಿಶೇಷವಾಗಿ ಶ್ರಮಿಸಿದ್ದಾರೆ. ಬೃಹತ್, ಮಧ್ಯಮ, ಸಣ್ಣ ಅಣೆಕಟ್ಟುಗಳನ್ನು ನಿರ್ಮಿಸಿ ಕೋಟ್ಯಂತರ ಹೆಕ್ಟೇರ್ ಭೂಮಿಗೆ ನೀರುಣಿಸುವುದಲ್ಲದೆ, ಅಪಾರ ಪ್ರಮಾಣದ ವಿದ್ಯುತ್ ಶಕ್ತಿ ಉತ್ಪಾದಿಸುವಲ್ಲಿ ಯಶಸ್ಸು ಕಂಡಿದ್ದಾರೆ. 'ಪ್ಯಾರಿಸ್ ಒಪ್ಪಂದ'ಕ್ಕೂ ಸಹಿಮಾಡಿ 2022ರ ವೇಳೆಗೆ ನವೀಕರಿಸಬಹುದಾದ ಇಂಧನಮೂಲಗಳಾದ ಸೂರ್ಯ, ಗಾಳಿ, ನೀರು ಮತ್ತು ಜೀವಿಶ್ಲೇಷಯೇಶಗಳಿಂದ 175 ಗಿಗಾ ವ್ಯಾಟ್‌ನಷ್ಟು ಶಕ್ತಿ ಸಂಪಾದಿಸುವ ಯೋಜನೆ ಪ್ರಾರಂಭಗೊಂಡಿದೆ.

ದೇಶದ ಅತಿದೊಡ್ಡ ಸೌರ ವಿದ್ಯುತ್ ಉತ್ಪಾದನಾ ಸ್ಥಾವರ ನಮ್ಮ ರಾಜ್ಯದ ಪಾವಗಡದಲ್ಲಿ ಕಾರ್ಯಾರಂಭ ಮಾಡಿದೆ. ತಾರಸಿ ಸೌರ ವಿದ್ಯುತ್ ಉತ್ಪಾದನೆಗೂ ಆದ್ಯತೆ ಮತ್ತು ಪ್ರೋತ್ಸಾಹ ನೀಡುತ್ತಿರುವ ಸರ್ಕಾರ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಗಂಭೀರ ಪ್ರಯತ್ನ ನಡೆಸಿದೆ. ವಾತಾವರಣ ಕೆಡಿಸದ ಶಕ್ತಿಮೂಲಗಳಾದ ಸೌರ, ಪವನ ವಿದ್ಯುತ್ ಉತ್ಪಾದನೆಯಲ್ಲಿ ದೊಡ್ಡ ಯಶಸ್ಸು ಗಳಿಸಿದ್ದೇವೆ.

### ಮಾಹಿತಿ ತಂತ್ರಜ್ಞಾನ/ಸಾಫ್ಟ್‌ವೇರ್ ಕ್ರಾಂತಿ

ಮಾಹಿತಿ ತಂತ್ರಜ್ಞಾನ ಮತ್ತು ಸಾಫ್ಟ್‌ವೇರ್ ಉದ್ಯಮದಲ್ಲಿ ಭಾರತದ ಸಾಧನೆ ಇತರೆ ಯಾವುದೇ ಮುಂದುವರೆದ ದೇಶಕ್ಕೆ ಕಡಿಮೆ ಇಲ್ಲ. ಬಹುಕಾಲ ಅಮೆರಿಕದೆಡೆ ಕಣ್ಣು ನೆಟ್ಟು ಕೂತಿದ್ದ ಅನೇಕ ಅಭಿವೃದ್ಧಿಶೀಲ ದೇಶಗಳೀಗ ಭಾರತದ ಸಹಾಯ ಯಾಚಿಸುತ್ತಿವೆಯಲ್ಲದೆ, ತಮ್ಮ ಬಂಡವಾಳವನ್ನು ಭಾರತದ ಸಾಫ್ಟ್‌ವೇರ್ ಉದ್ಯಮದಲ್ಲಿ ತೊಡಗಿಸಲು ಪ್ರಾರಂಭಿಸಿವೆ. ಇಲ್ಲಿನ ಯುವ ತಂತ್ರಜ್ಞರು ಇಡೀ ವಿಶ್ವಕ್ಕೆ ಬೇಕಾದ ಸಾಫ್ಟ್‌ವೇರ್ ಜ್ಞಾನವನ್ನು ಸಂಪಾದಿಸಿ ವಿದೇಶಗಳಲ್ಲಿ ಕೆಲಸ ಮಾಡಿ ತಮ್ಮ ಆದಾಯವನ್ನು ಹೆಚ್ಚಿಸಿಕೊಂಡಿರುವುದಲ್ಲದೆ, ಭಾರತದ ಹಿರಿಮೆಯನ್ನೂ ಹೆಚ್ಚಿಸಿದ್ದಾರೆ.

ಭಾರತದ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ವಿಶ್ವದೆಲ್ಲೆಡೆ ಬೇಡಿಕೆಯಿದೆ. ನಮ್ಮ ಸಾಫ್ಟ್‌ವೇರ್ ಉದ್ಯಮದ ರಫ್ತು ಮುಂದುವರೆದ ರಾಷ್ಟ್ರಗಳಾದ ಅಮೆರಿಕ, ಜಪಾನ್‌ಗಳ ಪ್ರಮಾಣಕ್ಕೆ ಸರಿಸಾಟಿಯಾಗಿ ನಿಂತಿದೆ. ಗೋಳೀಕರಣದ ಫಲವಾಗಿ ಹುಟ್ಟಿರುವ ಬಿಪಿಓ ಕಂಪನಿಗಳಲ್ಲಿ ಹಗಲಿರುಳು ದುಡಿಯುತ್ತಿರುವ ಭಾರತೀಯ